F.Y.
July 2017

Reg. No. ..................................

Name ......................................

806

# First Year Higher Secondary Improvement Examination

## Part - II

## KANNADA

Maximum : 80 Scores

Time : 2½ Hours

Cool off time : 15 Minutes

***General Instructions to Candidates :***

- There is a 'Cool off time' of 15 minutes in addition to the writing time of 2½ hrs.
- You are neither allowed to write your answers nor to discuss anything with others during the 'cool off time'.
- Use the 'cool off time' to get familiar with questions and to plan your answers.
- Read questions carefully before answering.
- All questions are compulsory and only internal choice is allowed.
- When you select a question, all the sub-questions must be answered from the same question itself.
- Electronic devices except nonprogrammable calculators are not allowed in the Examination Hall.

**ಸೂಚನೆಗಳು:**

- ಉತ್ತರ ಬರೆಯಲು 2½ ಗಂಟೆಗಳ ಸಮಯವಲ್ಲದೆ 15 ನಿಮಿಷಗಳ 'ಕೂಲ್ ಆಫ್ ಟೈಮ್'ನ್ನು ನೀಡಲಾಗಿದೆ.
- 'ಕೂಲ್ ಆಫ್ ಟೈಮ್' ನಲ್ಲಿ ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು
- 'ಕೂಲ್ ಆಫ್ ಟೈಮ್‌ನ್ನು' ಪ್ರಶ್ನೆಗಳನ್ನು ಪರಿಚಯ ಮಾಡಿಕೊಳ್ಳಲು ಹಾಗೂ ಉತ್ತರಗಳ ಕುರಿತು ಆಲೋಚಿಸಲು ಉಪಯೋಗಿಸಿರಿ.
- ಉತ್ತರಗಳನ್ನು ಬರೆಯುವ ಮೊದಲು ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಎಲ್ಲ ಪ್ರಶ್ನೆಗಳೂ ಕಡ್ಡಾಯವಾಗಿವೆ. ಆಯ್ಕೆಗಳಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಉತ್ತರಿಸಿರಿ.

**1** ರಿಂದ **4** ರ ವರೆಗಿನ ಪ್ರಶ್ನೆಗಳಿಗೆ ಉತ್ತರವನ್ನು ಆವರಣದೊಳಗಿನಿಂದ ಆಯ್ದು ಬರೆಯಿರಿ

**1.** ಇವುಗಳಲ್ಲಿ ಡಾ. ಪ್ರಭುಶಂಕರರ ಸಂಶೋಧನ ಪ್ರಬಂಧ ಯಾವುದು?
(ಅಮೇರಿಕಾದಲ್ಲಿ ನಾನು ಮತ್ತು ಶಾಂತಿ, ಆಮ್ರಪಾಲಿ, ಕನ್ನಡದಲ್ಲಿ ಭಾವಗೀತೆ, ಅಂಗುಲಿಮಾಲ) **(1)**

**2.** ಈ ಕೆಳಗಿನವುಗಳಲ್ಲಿ ಸರಿಯಾದ ಪದ ಯಾವುದು?
(ವಿದ್ಯಾಭ್ಯಾಸ, ವಿಧ್ಯಾಬ್ಯಾಸ, ವಿಧ್ಯಾಭ್ಯಾಸ, ವಿದ್ಯಬ್ಯಾಸ) **(1)**

3. ಆಯ್ದಕ್ಕಿ ಲಕ್ಕಮ್ಮಳ ವಚನಗಳ ಅಂಕಿತ ಯಾವುದು?
(ಗುಹೇಶ್ವರಲಿಂಗ, ಅಮುಗೇಶ್ವರ, ಅಮಲೇಶ್ವರಲಿಂಗ, ಚೆನ್ನಮಲ್ಲಿಕಾರ್ಜುನ) **(1)**

4. 'ಒಸರು' ಕಥೆಯನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?
(ಸರಕುಗಳು, ದಂಬರಿ, ಕಚ್ಛಾದ, ದಜ್ಜಾಲ) **(1)**

**5** ರಿಂದ **14** ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.

5. ರಸಾನುಭವ – ಪದವಿಂಗಡಿಸಿ ಬರೆಯಿರಿ **(1)**

6. ಸುಂದರ, ಪ್ರವೀಣ – ಈ ಪದಗಳ ಭಾವನಾಮ ರೂಪಗಳನ್ನು ಬರೆಯಿರಿ. **(1)**

7. ಕಡಲು – ಇದರ ಎರಡು ಪರ್ಯಾಯ ಪದಗಳನ್ನು ಸೂಚಿಸಿರಿ. **(1)**

8. ನಿಟ್ಟುಸಿರು – ಈ ಪದದ ವಿಗ್ರಹವಾಕ್ಯ ಬರೆಯಿರಿ. **(1)**

9. ತರಕ್ಷು, ಚರಿಗೆ – ಈ ಪದಗಳ ಅರ್ಥವನ್ನು ಬರೆಯಿರಿ. **(1)**

10. ಸೊದೆ, ಸೊಗ – ಈ ಪದಗಳ ಸಂಸ್ಕೃತರೂಪಗಳನ್ನು ಬರೆಯಿರಿ. **(1)**

11. 'ಸರ್ಯಾಗ್ ತಿಳ್ಕೊಳ್ಳಿ, ಮತ್ತೆ ನಾನು ಸರ್ಯಾಗ್ ಡಂಗುರ ಹಾಕ್ಲಿಲ್ಲ ಅನ್ಬಾರ್ದು' – ಶಿಷ್ಟಕನ್ನಡಕ್ಕೆ ಪರಿವರ್ತಿಸಿ ಬರೆಯಿರಿ. **(1)**

12. 'ಬಂಡವಾಳಶಾಹಿಗಳ <u>ಕಪಿಮುಷ್ಟಿಯಲ್ಲಿ</u> ಅಮಾಯಕ ಜನರ ಪಾಡು ದಯನೀಯವಾಗಿತ್ತು' ಅಡಿಗೆರೆಯೆಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ಬರೆಯಿರಿ. **(1)**

13. 'ತೆಯ್ಯಂ' ಆರಾಧನೆಯಲ್ಲಿ ತೋತ್ತಂ ಪಾಟ್ಟುಗಳನ್ನು ಹಾಡುವ ಬಗೆ ಹೇಗೆ? **(2)**

14. ಕೆಳಗೆ ನೀಡಿರುವ ತ್ರಿಪದಿಯ ಆಶಯವನ್ನು ಬರೆಯಿರಿ.

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ । ಕಂದಯ್ಯ
ಜೂಜಿಗೆ ಮನವ ಬಿಡದಿರು **(2)**

**15** ರಿಂದ **22** ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.

**15.** ಶೇಣಿಯವರ ಪ್ರತಿನಾಯಕ ಪಾತ್ರಗಳನ್ನೇ ಯಕ್ಷಗಾನ ರಸಿಕರು ಹೆಚ್ಚಾಗಿ ಇಷ್ಟಪಡಲು ಕಾರಣವೇನು? ವಿಶದಪಡಿಸಿರಿ **(4)**

**16.** 'ಬಕ' ನಾಟಕದಲ್ಲಿ ಬಂದಿರುವ ಈ ಮಾತನ್ನು ಸಂದರ್ಭದೊಂದಿಗೆ ವಿವರಿಸಿರಿ.

★ ಕಾನೂನು ಮಾಡೋದು ಜನಗಳನ್ನು ಕೊಲ್ಲೋಕಲ್ಲ, ಬದುಕಿಸೋಕೆ. **(4)**

**17.** 'ಹುಗ್ಗಿ' ಕಥೆಯಲ್ಲಿ ಬಡತನದ ಘೋರಚಿತ್ರಣವು ಹೇಗೆ ಮೂಡಿಬಂದಿದೆ? ವಿವರಿಸಿರಿ. **(4)**

**18.** ಭಾವಾರ್ಥ ಬರೆಯಿರಿ.

ಅನುಭವದ ಪಾಲೊಳು ವಿಚಾರಮಂಥನವಾಗೆ
ಜನಿಯಿಕುಂ ಜ್ಞಾನ ನವನೀತವದೆ ಸುಖದಂ
ಗಿಣಿಯೋದು ಪುಸ್ತಕ ಜ್ಞಾನ; ನಿನ್ನನುಭವವೆ
ನಿನಗೆ ಧರುಮದ ದೀಪ, ಮಂಕುತಿಮ್ಮ **(4)**

**19.** ಸುಗ್ಗಿಯಾಗಮನದ ವೈಭವ 'ಸುಗ್ಗಿ ಬರುತಿದೆ' ಕವನದಲ್ಲಿ ಚಿತ್ರಣಗೊಂಡ ಬಗೆಯನ್ನು ಬಣ್ಣಿಸಿರಿ. **(5)**

**20.** 'ಕಡಲ ಒಡಲು' ಪಾಠಭಾಗದಲ್ಲಿ ಬಂದಿರುವ ಕಡಲಾಳದ ಜೀವಿಗಳ ವರ್ಣವೈವಿಧ್ಯದ ಬದುಕನ್ನು ನಿರೂಪಿಸಿರಿ. **(5)**

**21.** ಕವಯತ್ರಿ ಸುನಾಮಿಯನ್ನು 'ಪಾಪದ ಕೊಡ ತುಂಬಿದ ಜಲಪ್ರಳಯ' ಎಂದೆನ್ನಲು ಕಾರಣವೇನು? ವಿಶದಪಡಿಸಿರಿ. **(5)**

**22.** ಕೆಳಗೆ ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರಹಾಕಿ, ಗಣವಿಭಜನೆ ಮಾಡಿ, ಛಂದಸ್ಸಿನ ಲಕ್ಷಣವನ್ನು ತಿಳಿಸಿರಿ.

ಅಂತು ದೊರೆವೆತ್ತು ಬಂದ ಬ
ಸಂತದೊಳಾ ಮಾರಿದತ್ತನುಂ ಪುರಜನಮುಂ
ತಂತಮಗೆ ಚಂಡಮಾರಿಗೆ
ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರ್ **(5)**

ಒಂದು ಪುಟಕ್ಕೆ ಮೀರದಂತೆ ಉತ್ತರಿಸಿರಿ.

**23.** ದೃಢವಿಲ್ಲದ ಭಕ್ತಿ ಮತ್ತು ಕಾಯಕ ನಿಷ್ಠೆ ಇವುಗಳ ಕುರಿತು ಆಯ್ದಕ್ಕಿ ಲಕ್ಕಮ್ಮಳ ವಿಚಾರಧಾರೆಗಳನ್ನು ಸಂಗ್ರಹಿಸಿ ಬರೆಯಿರಿ. **(6)**

**24.** ದುಷ್ಟಬುದ್ಧಿಯ ವಂಚನೆಯನ್ನು ಧರ್ಮಬುದ್ಧಿಯು ತನ್ನ ವ್ಯವಹಾರ ಬುದ್ಧಿಯನ್ನು ಬಳಸಿಕೊಂಡು ಭೇದಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ. **(6)**

ಒಂದೂವರೆ ಪುಟಕ್ಕೆ ಮೀರದಂತೆ ಉತ್ತರಿಸಿರಿ.

**25.** 'ಒಸರು' ಕಥೆಯ ಖಾದ್ರಿಕಾಕನ ಪಾತ್ರಚಿತ್ರಣ ಮಾಡಿರಿ. **(8)**

**ಅಥವಾ**

ಅಮಾಯಕ ಜನರ ಮೇಲೆ ಅಧಿಕಾರಶಾಹಿಗಳ ದಬ್ಬಾಳಿಕೆ 'ಬಕ' ನಾಟಕದಲ್ಲಿ ಪ್ರತಿಬಿಂಬಿತವಾದ ಬಗೆಯ ಕುರಿತು ವಿಮರ್ಶಾತ್ಮಕ ಪ್ರಬಂಧವೊಂದನ್ನು ಬರೆಯಿರಿ. **(8)**

**26.** 'ನಿನ್ನಯ ವೀರರ್ವೈರ ನೋಯಿಸೆನು' ಎಂಬ ಪಾಠಭಾಗದಲ್ಲಿ ಕಾಣುವ ಕರ್ಣನ ಮನಸ್ಸಿನ ತಳಮಳ ಮತ್ತು ಅವನ ಸ್ವಾಮಿನಿಷ್ಠೆ ಅಸಾಮಾನ್ಯವಾದುದು ಎಂಬ ಮಾತನ್ನು ಸಮರ್ಥಿಸಿ ಬರೆಯಿರಿ. **(8)**

**ಅಥವಾ**

ಯುದ್ಧದ ಘೋರ ಪರಿಣಾಮ 'ಬ್ಲೆನ್‌ಹೀಂ ಕದನ' ಕವನದಲ್ಲಿ ಚಿತ್ರಣಗೊಂಡ ಬಗೆಯನ್ನು ವಿವರಿಸಿರಿ. **(8)**

Kannada - 806 1/6

July 2017

**FIRST YEAR HIGHER SECONDARY EXAMINATION, ~~MARCH / SEPTEMBER 20....~~**

| Qn. No. | Sub Qns | Answer Key / Value points | Score | Total |
|---|---|---|---|---|
| 1. | | ಕನ್ನಡದಲ್ಲಿ ಭಾವಗೀತೆ | 1 | 1 |
| 2. | | ವಿದ್ಯಾಭ್ಯಾಸ | 1 | 1 |
| 3. | | ಅಮಲೇಶ್ವರ ಲಿಂಗ | 1 | 1 |
| 4. | | ದಜ್ಜಾಲ | 1 | 1 |
| 5 | | ರಸ + ಅನುಭವ | 1 | 1 |
| 6 | | ಸೌಂದರ್ಯ, ಪ್ರಾವೀಣ್ಯ | 1 | 1 |
| 7 | | ಸಮುದ್ರ, ಶರಧಿ, ಅಬ್ಧಿ... ಯಾವುದಾದರು 2ನ್ನು ಬರೆದಿದ್ದರೆ | 1 | 1 |
| 8 | | ನಿಡಿದಾದ ಉಸಿರು | 1 | 1 |
| 9 | | ಹುಲಿ, ಭಿಕ್ಷೆ | 1 | 1 |
| 10. | | ಸುಧಾ, ಸುಖ | 1 | 1 |
| 11 | | ಸರಿಯಾಗಿ ತಿಳಿದುಕೊಳ್ಳಿ, ಮತ್ತೆ ನಾವು ಸರಿಯಾಗಿ ತಂಗುರ ಹಾಕಲಿಲ್ಲ ... ನ್ನಬಾರದು | 1 | 1 |
| 12 | | ಪದವನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯ ಬರೆದಿದ್ದರೆ | 1 | 1 |

| Qn. No. | Sub Qns | Answer Key / Value points | Score | Total |
| --- | --- | --- | --- | --- |
| 13 | | ಗದ್ಯರೂಪದಲ್ಲಿರುವ ಸ್ತೋತ್ರಂ ಪಾಟ್ಟುಗಳನ್ನು ಚೆಂಡೆವಾದ್ಯ ಮೇಳಗಳೊಂದಿಗೆ ಹಾಡಲಾಗುತ್ತದೆ. ತೆಯ್ಯ ಕಟ್ಟುವವನು ಚೆಂಡೆಯನ್ನು ನಿಧಾನ ಗತಿಯಲ್ಲಿ ಬಾರಿಸುತ್ತಾ ಸ್ತುತಿ ಗೀತೆಯ ನಿರ್ದಿಷ್ಟ ಚರಣಗಳನ್ನು ಹಾಡಿದರೆ ಗಾಯಕ ಗುಂಪಿನವರು ಬಾಕಿ ಉಳಿದ ಚರಣಗಳನ್ನು ಹಾಡುತ್ತಾರೆ. | 2 | 2 |
| 14 | | ಜೂಜು ಒಂದು ವ್ಯಸನ. ಅದಕ್ಕೆ ಬಲಿಯಾಗದಿರು ಎಂದು ತನ್ನ ಕಂದನಿಗೆ ಬುದ್ಧಿಮಾತು. ಜೂಜಿನಿಂದ ಪಾಂಡವರು ರಾಜ್ಯವನ್ನು ಸರ್ವಸ್ವವನ್ನು ಕಳೆದುಕೊಂಡರು. ಈ ಜೂಜಿನಿಂದಾಗಿ ನಳನು ರಾಜ್ಯಕೋಶಾದಿ, ಹೆಂಡತಿ ಮಕ್ಕಳನ್ನು ಕಳೆದುಕೊಂಡು ಬಳಲಿದನು | 2 | 2 |
| 15 | | ಪ್ರತಿನಾಯಕ ಪಾತ್ರಗಳಿಗೆ ಜೀವತುಂಬುತ್ತಿದ್ದ ಶೇಣಿ, ಅಪ್ರತಿಮ ಕಂಠಶ್ರೀ ಎಂಥವರನ್ನು ಬೆರಗುಗೊಳಿಸುತ್ತಿತ್ತು. ರಾವಣ, ಕರ್ಣ, ಮಾಗಧ ಮೊದಲಾದ ಪಾತ್ರಗಳಿಗೆ ಮಹತ್ವವನ್ನು ನೀಡುತ್ತಿದ್ದುದು. ಶೇಣಿಯವರು ಪ್ರತಿನಾಯಕ ಪಾತ್ರ ನಿರ್ವಹಿಸಿದರೆ ಪ್ರಧಾನ ಪಾತ್ರವನ್ನು ಬಿಟ್ಟು ಪ್ರೇಕ್ಷಕರು ಮನಸ್ಸು ಪ್ರತಿನಾಯಕನೆಡೆಗೆ ಹರಿಯುತ್ತಿದ್ದುದು ಇತ್ಯಾದಿ | 2<br>2 | 4 |

| Qn. No. | Sub Qns | Answer Key / Value points | Score | Total |
|---|---|---|---|---|
| 16 | | ಬಕಾಸುರನಿಗೆ ಆಹಾರವಾಗಿ ಹೋಗಬೇಕಾದ ತಂದೆಯನ್ನು ತಡೆದು ಮಗನು ಹೇಳುವ ಮಾತು., ಬಕಾಸುರ - ರಾಜನ ನಡುವಿನ ಒಪ್ಪಂದ, ಒಪ್ಪಂದ ಪ್ರಕಾರ ಸರದಿಯಂತೆ ಜನ ಆಹಾರವಾಗಿ ಹೋಗಬೇಕಾಗಿರುವುದು. | 1 | 4 |
| | | ರಾಜನ ಕಾನೂನನ್ನು ಧಿಕ್ಕರಿಸುವ ಯುವಕರು ಅವನ ಧಿಕ್ಕಾರದ ಮಾತುಗಳು.. ಇವುಗಳನ್ನು ಬರೆದಿದ್ದರೆ | 3 | |
| 17 | | ಒಪ್ಪೊತ್ತಿನ ಊಟಕ್ಕೆ ಪರದಾಡುವ ಸಂಸಾರ, ಹುಗ್ಗಿ ಅನ್ನದ ಸಂಭ್ರಮ, ಬಸವನಿಗಾದ ಸಂತೋಷ. ಹುಗ್ಗಿ ಅನ್ನಕ್ಕಾಗಿ... ಹಾತೊರೆಯುವಿಕೆ, ಅವನ ಅಮ್ಮನ ದುಃಖ, ಅಪ್ಪನ ಅಸಹಾಯಕತೆ, ಕೂಲಿಗಾಗಿ ಮಗನನ್ನು ಗೌಡನ ಬಳಿ ನಿಯಮಿಸಿದ್ದು, ಉಪಾಯವಾಗಿ ಗೌಡನ ಬಳಿಗೆ ಕಳುಹಿಸುವುದು, ಗೌಡನ ಮಾತಿಗೆ ಬಸವನ ಪ್ರತಿಕ್ರಿಯೆ, ಇವುಗಳನ್ನು ನಿರೂಪಿಸಿದ್ದರೆ | 4 | 4 |
| 18 | | ಅನುಭವದ ಹಾಲನ್ನು ಕಡೆದಾಗಲೆ ಜ್ಞಾನ ಉದಯಿಸುವುದು, ಮೊಸರಿನಲ್ಲಿ ಬೆಣ್ಣೆ ಸಿಗಬೇಕಾದರೆ ಮಂಥನ ನಡೆಯಲೇ ಬೇಕು, ಅನುಭವದ ಮಂಥನದಿಂದ ಜ್ಞಾನ... ಹೀಗೆ ಭಾವಾರ್ಥ ಬರೆದಿದ್ದರೆ | 4 | 4 |

| Qn. No. | Sub Qns | Answer Key / Value points | Score | Total |
|---|---|---|---|---|
| 19 | | "ಸುಗ್ಗಿ" ಯನ್ನು ಪುರುಷನನ್ನಾಗಿ ಕಲ್ಪಿಸಿರುವುದು, ಸುಗ್ಗಿಯ ಆಗಮನವನ್ನು ಎದುರುಗೊಳ್ಳುವ ಪ್ರಕೃತಿ, ಪ್ರಕೃತಿಯಲ್ಲಾದ ಬದಲಾವಣೆಗಳು, ತರುಗಳು, ಮೃಗ ಪಕ್ಷಿಗಳ ಸಂಭ್ರಮ, ಮೇವಿಗಾಗಿ ಬಿಟ್ಟ ಗೋವುಗಳು, ಮೈಮರೆತ ಗೊಲ್ಲ ... ಇತ್ಯಾದಿ ಅಂಶಗಳನ್ನು ನಿರೂಪಿಸಿದ್ದಾರೆ | 3<br>2 | 5 |
| 20 | | ಅಂಡಮಾನಿನ ಕಡಲ ಒಡಲಾಳದ ಜೀವಪ್ರಪಂಚ, ಮತ್ಸ್ಯ ಪ್ರಭೇದಗಳು, ವರ್ಣವೈವಿಧ್ಯ ಬದುಕಿನ ರೀತಿ ಇವುಗಳನ್ನು ಸಂಗ್ರಹವಾಗಿ ಹೇಳಿದ್ದಾರೆ<br>ನಿರೂಪಣಾ ವಿಧಾನ | 3<br>2 | 5 |
| 21 | | ಸುನಾಮಿ - ಭೀಕರ ಜಲಪ್ರಳಯ, ಅದರ ಘೋರ ಪರಿಣಾಮಗಳು, ಸಹಸ್ರಾರು ಜೀವಿಗಳ ಬಲಿ, ಮನೆ ಮಠಗಳನ್ನು ಕಳೆದುಕೊಂಡ ಜನರ ಪರಿಸ್ಥಿತಿ, - ಸುನಾಮಿಗೆ ಕಾರಣ ಕುರಿತು ಕವಯಿತ್ರಿ ಹೇಳುವ ಮಾತು- ಪಾಪಕೃತ್ಯಗಳು, ಮನುಷ್ಯ ಪ್ರವೃತ್ತಿ, ಪ್ರಕೃತಿ ವಿಕೋಪ ಇತ್ಯಾದಿಗಳನ್ನು ವಿವರಿಸಿದ್ದಾರೆ | 4<br>1 | 5 |
| 22 | | ಪ್ರಸ್ತಾರ ಹಾಕಿದ್ದಾರೆ<br>ಗಣವಿಭಜನೆ ಮಾಡಿದ್ದಾರೆ<br>ಛಂದಸ್ಸಿನ ಲಕ್ಷಣ ತಿಳಿಸಿದ್ದಾರೆ | 2<br>1<br>2 | 5 |

| Qn. No. | Sub Qns | Answer Key / Value points | Score | Total |
|---|---|---|---|---|
| 23 | | ಆಯ್ದಕ್ಕಿ ಲಕ್ಕಮ್ಮಳ ವಚನಗಳಲ್ಲಿ ಉಕ್ತವಾಗಿರುವಂತೆ ಭಕ್ತಿಯ ಡಾಂಭಿಕತೆಯನ್ನು ನಿರೂಪಿಸಿದ್ದರೆ | 3 | 6 |
| | | ಆಯ್ದಕ್ಕಿ ಲಕ್ಕಮನ ವಚನಗಳಲ್ಲಿ ಪ್ರತಿಪಾದಿತವಾಗಿರುವ ಕಾಯಕ ನಿಷ್ಠೆ-ಯನ್ನು ವಿವರಿಸಿದ್ದರೆ | 3 | |
| 24 | | ಧರ್ಮಬುದ್ಧಿ, ದುಷ್ಟಬುದ್ಧಿ ವ್ಯಾಪಾರಿಗಳು - ಹೊನ್ನು ಹಂಚಿಕೊಂಡದ್ದು, ದುಷ್ಟಬುದ್ಧಿಯ ಮಾತನ್ನು ನಂಬಿ ಹೊನ್ನನ್ನು ವಟವೃಕ್ಷದ ಕೆಳಗೆ ಹೂತು ಹಾಕಿರುವುದು - ದುಷ್ಟಬುದ್ಧಿಯ ವಂಚನೆ - | 3 | 6 |
| | | ಧರ್ಮಬುದ್ಧಿಯ ಮೇಲೆ ಆರೋಪ- ನಡೆದಿರುವ ವಂಚನೆಯನ್ನು ಪತ್ತೆಹಚ್ಚಿದ ರೀತಿ, ಧರ್ಮಬುದ್ಧಿಯು ವ್ಯಾಪಾರ ಬುದ್ಧಿಯನ್ನು ತಿಳಿಸಿದ್ದರೆ | 3 | |
| 25. | | ಜಿಮ್ಮಿಲಲ್ಲ ಮೇಲಿನ ಪ್ರೀತಿ, ವಾತ್ಸಲ್ಯಮಯಿ ಪಾತ್ರಿಕಾ, ಅವಳ ಬಳಿಗಾಗಿ ಹಾತೊರೆಯುವುದು- ಪ್ರಕೃತಿಯೊಂದಿಗಿನ ಒಡನಾಟ, ಹಸಿರ ಸಿರಿ ಪ್ರಕೃತಿಯ ಕಾಳಜಿ, ಸುರಂಗ ತೋಡುವ ಹವ್ಯಾಸ, ನೀರಿನ ಜಾಡು ಹಿಡಿದು ಸುರಂಗವನ್ನು ನಿರ್ಮಿಸಿ ತೋಟಗಳಿಗೆ ನೀರನ್ನು ಒದಗಿಸುವುದು, ಊರಿನ ಒಳಿತಿಗಾಗಿ ದುಡಿಯುವ ಮನಸ್ಸು, ಬೋರ್‌ವೆಲ್ ಪದ್ಧತಿಯನ್ನು ವಿರೋಧಿಸುವುದು, ಯಂತ್ರದ ಮೂಲಕ ಭೂಮಿಯನ್ನು ಕೊರೆಯುವುದರ ವಿರುದ್ಧ ಪ್ರತಿಭಟಿಸುವುದು, ತಾನೇ ಏಕಾಂಗಿಯಾಗಿ ಸುರಂಗವನ್ನು ನಿರ್ಮಿಸಿ ಹೊರಬರುವ, ಆ ಇಳಿವಯಸ್ಸಿನಲ್ಲಿ ಯಾವ ಮಾಟಕೆ ತೋಡಿ ನೀರನ್ನು ಹರಿಯಿಸಿದ್ದು, ಪಾತ್ರಿಕಾರನ ... | 8 | 8 |

| Qn. No. | Sub Qns | Answer Key / Value points | Score | Total |
| --- | --- | --- | --- | --- |
| | | ಅಥವಾ | | |
| | | ಬಕನಾಟಕ ಪುರಾಣದ ಕಥೆಯಾದರೂ ವಾಸ್ತವ ಸಮಾಜದ ಸಮಸ್ಯೆಗಳನ್ನು ಪ್ರತಿಬಿಂಬಿಸುವುದು, | 3 | |
| | | ಬಕ ಹಾಗೂ ರಾಜನ ನಡುವೆ ನಡೆದ ಒಪ್ಪಂದ, | 2 | 8 |
| | | ಅಧಿಕಾರಿಗಳ ಲಾಲಸೆ, ಹದಗೆಟ್ಟ ಸಮಾಜ, ಲಂಚವತಾರ, ಭ್ರಷ್ಟಾಚಾರ, ಇವುಗಳ ನಡುವೆ ಜನಸಾಮಾನ್ಯರ ಹಾಡು, ಇವೇ ಮೊದಲಾದವುಗಳ ವಿವರಿಸಿದ್ದರೆ. | 3 | |
| | 26 | ಕಾವ್ಯಭಾಗದ ಸಂದರ್ಭವನ್ನು ತಿಳಿಸಿದ್ದರೆ. | 2 | |
| | | ಕೃಷ್ಣನ ಭೇದೋಪಾಯ, ಕರ್ಣನಿಗೆ ಅವನ ಜನ್ಮ ವೃತ್ತಾಂತವನ್ನು ತಿಳಿಯಪಡಿಸಿದುದು, ಕೃಷ್ಣನೊಡ್ಡಿದ ಆಮಿಷಗಳು ಇವುಗಳನ್ನು ವಿವರಿಸಿದ್ದರೆ. | 3 | 8 |
| | | ಜನ್ಮವೃತ್ತಾಂತವನ್ನು ತಿಳಿದ ಕರ್ಣನ ಮನಸ್ಥಿತಿ, ಉಭಯ ಸಂಕಟಕ್ಕೆ ಒಳಗಾದ ಬಗೆ, ತನ್ನ ಧರ್ಮಸಂಕಟವನ್ನು ತಿಳಿಯಪಡಿಸುದುದು ಇವುಗಳ ವಿವರಣೆಗೆ | 3 | |
| | | ಅಥವಾ | | |
| | | 'ಬ್ಲೆನ್ ಹೀಮ್ ಕದನ' ಕವನದ - ಆಶಯವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದರೆ. | 3 | |
| | | ಕಥನ ಕವನದಲ್ಲಿ ಮೂಡಿಬಂದ 'ಬ್ಲೆನ್ ಹೀಂ ಕದನ'ದ ಚಿತ್ರಣವನ್ನು ನಿರೂಪಿಸಿದ್ದರೆ | 3 | 8 |
| | | ಯುದ್ಧದ ನಿರರ್ಥಕತೆ ಹಾಗೂ ಅದರ ದುಷ್ಪರಿಣಾಮಗಳನ್ನು ವಿವೇಚಿಸಿದ್ದರೆ | 2 | |